# ಹೊಸ ವಿಲ್ಲನ್

‘ಟೈಗರ್ ಜಿಂದಾ ಹೈ’ ಚಿತ್ರದ ಮೂಲಕ ಬಾಲಿವುಡ್‌ಗೆ ಹೊಸ ವಿಲ್ಲನ್ ಒಬ್ಬನ ಭರ್ಜರಿ ಎಂಟ್ರಿ ಆಗಿದೆ. ಈ ಚಿತ್ರದ ಮುಖ್ಯ ವಿಲ್ಲನ್ ಅಬೂ ಉಸ್ಮಾನ್ ಪಾತ್ರದಲ್ಲಿ ಮಿಂಚಿದ ನಟ ಸಜ್ಜದ್ ದೇಲಫ್ರೂಜ್. 34ರ ಹರೆಯದ ಈತ ಸ್ಫುರದ್ರೂಪಿ ಮಾತ್ರವಲ್ಲ, ಕಠಿಣ ಪರಿಶ್ರಮ ಪಟ್ಟವನು ಎಂಬ ಹೊಗಳಿಕೆಯೂ ಬಾಲಿವುಡ್‌ನಲ್ಲಿ ಕೇಳಿಬರುತ್ತಿದೆ.

ಮೂಲತಃ ಇರಾನ್‌ನಲ್ಲಿ ಹುಟ್ಟಿದ ಸಜ್ಜದ್, ಮೂರರ ಎಳವೆಯಲ್ಲಿ ಯುಎಇ ಗೆ ಕುಟುಂಬದ ಜತೆ ಬಂದ. ಅಲ್ಲಿ ನೆರೆಹೊರೆಯಲ್ಲಿ ಸಾಕಷ್ಟು ಭಾರತೀಯ ಕುಟುಂಬಗಳಿದ್ದು ಅವರಿಂದಾಗಿ ಹಿಂದಿ ಕಲಿತ. ಪಿಆರ್ ಸಂಸ್ಥೆಯೊಂದರಲ್ಲಿ ಮ್ಯಾನೇಜರ್ ಆಗಿದ್ದಾತನಿಗೆ ಮುಂಚಿನಿಂದಲೂ ಬಾಲಿವುಡ್ ಸೆಳೆತ ಇದ್ದೇ ಇತ್ತು. ಕೆಲಸಕ್ಕೆ ರಾಜೀನಾಮೆ ಕೊಟ್ಟು ಮುಂಬೈಗೆ ಬಂದಿಳಿದ ಸಜ್ಜದ್ ಇಲ್ಲಿ ಮೂರು ವರ್ಷ ಲಾಟರಿ ಹೊಡೆದದ್ದೇ ಬಂತು. ಸಣ್ಣ ಪುಟ್ಟ ಪಾತ್ರಗಳು ಸಿಕ್ಕಿದವು. ಆದರೆ ಕೆಲವು ಚಿತ್ರಗಳಲ್ಲಿ ಕೊನೆಗೆ ಆ ಶಾಟ್‌ಗಳೂ ಕತ್ತರಿ ಪ್ರಯೋಗಕ್ಕೆ ಒಳಗಾಗಿದ್ದವು. ಈ ಮಧ್ಯೆ ಜಾಹೀರಾತುಗಳಲ್ಲಿ ಕಾಣಿಸಿಕೊಂಡದ್ದೂ ಆಯಿತು. ಇದ್ದುದರಲ್ಲಿ ಅಕ್ಷಯ್ ಕುಮಾರ್‌ನ ‘ಬೇಬಿ’ ಚಿತ್ರದಲ್ಲಿ ಸಣ್ಣದೊಂದು ಡಾಕ್ಟರ್ ಪಾತ್ರ ಸಿಕ್ಕಿದ್ದೇ ದೊಡ್ಡ ಸಾಧನೆ ಎನ್ನಿಸಿತ್ತು.

‘ಟೈಗರ್..’ ತಂಡದಿಂದ ಕರೆ ಬಂದಾಗ ಮೊದಲು ಇನ್ನೊಂದು ಸಣ್ಣ ಪಾತ್ರಕ್ಕೆ ಎಂದಿತ್ತು. ಮೂರು ಸಲದ ಆಡಿಷನ್ ಮುಗಿದು ಬಳಿಕ ಕ್ಯಾಮೆರಾ ಟೆಸ್ಟ್‌ಗೆ ಕರೆ ಬಂತು. ಕೊನೆಗೂ ಮುಖ್ಯ ವಿಲ್ಲನ್ ಪಾತ್ರ ದಕ್ಕಿತು. ಈಗ ಬಾಲಿವುಡ್‌ನಲ್ಲಿ ಎಲ್ಲರ ಕಣ್ಣು ಸಜ್ಜದ್ ಮೇಲಿದೆ.



■ ಬಿಂದು

